ಮನೆಯಲ್ಲಿನ ಕಪಾಟಿನೊಳಗೆ ಭದ್ರವಾಗಿ ಅಡಗಿಸಿಟ್ಟು ಬಂದವರಂತೆ ತೋರುಬೆರಳಿನಿಂದ ಮೊಬೈಲಿನ ತೆರೆಯನ್ನು ತೀಡುತ್ತಿದ್ದರು. ಕೂತಿರುವ ಯಾರೋ ಸಣ್ಣಗೆ ಕೆಮ್ಮಿದರೆ ಉಳಿದವರೆಲ್ಲ ಆ ಕಡೆ ದೃಷ್ಟಿ ಹರಿಸಿದ್ದಕ್ಕೆ ಆ ಬಡಪಾಯಿ ಬಾಯಿಗೆ ಬಟ್ಟೆ ಮುಚ್ಚಿ ತಡೆಹಿಡಿಯುತ್ತಿದ್ದ. ಸಣ್ಣ ಮಗುವೊಂದು ಚೀರಲು ಆರಂಭಿಸಿದರೆ, ಅದನ್ನು ಎತ್ತಿಕೊಂಡ ತಾಯಿ ಅದರ ಬಾಯಿಗೆ ಸೆರಗು ಹಿಡಿದು ಹೊರಗೆ ಒಯ್ಯುತ್ತಿದ್ದಳು. ಒಬ್ಬ ರೋಗಿಯ ಹಿಂದೆ ಹತ್ತಾರು ಮಂದಿ ಬೆಂಗಾವಲಿಗೆ ಬಂದ ಪರಿಣಾಮ ಅಲ್ಲಿ ಸ್ವತಃ ರೋಗಿಯಾದವರಿಗೆ ಕೂರಲು ಜಾಗವಿಲ್ಲ ಎನ್ನುವುದನ್ನ ಅಲ್ಲಿನ ಗಂಧರ್ವಸಖಿಯರು ಗಮನಿಸುತ್ತಿರಲೇ ಇಲ್ಲ. ಸಣ್ಣ ಪುಟ್ಟ ಗುಸುಪಿಸುಗಳ ನಡುವೆಯೂ ಒಂದು ನಿಷ್ಕಾರಣವಾದ, ಅಸಹನೀಯವಾದ ಮೌನ ಅಲ್ಲಿತ್ತು.

ನಿಂತು ಸಾಕಾದ ಸುಲೇಖ ಆಸ್ಪತ್ರೆಯ ವ್ಯವಸ್ಥೆಯ ಬಗ್ಗೆ, ಇನ್ನೂ ಬದಲಾಗದ ಜನಗಳ ಬಗ್ಗೆ ಮನಸ್ಸಿನಲ್ಲೇ ಬೈಯ್ದುಕೊಳ್ಳುತ್ತ ಕೂರಲು ತನಗೆಲ್ಲಾದರೂ ಜಾಗ ಸಿಗಬಹುದೇ? ಎಂದು ಅರಸುತ್ತಿದ್ದ. ಬೆಂಗಳೂರಿನಲ್ಲಾದರೆ ಮೊದಲೇ ಅಪಾಯಿಂಟ್‌ಮೆಂಟ್ ಪಡೆದು, ನಿಗದಿಪಡಿಸಿದ ಹೊತ್ತಿಗೆ ಹೋಗಿ, ಛಕಾಛಕ್ ಭೇಟಿ ಇಷ್ಟೊತ್ತಿಗೆ ಯಾವಾಗ್ಲೋ ಮುಗಿದಿರೋದು, ನಾನ್‌ಸೆನ್ಸ್. ಈ ದೇಶ ಯಾವತ್ತೂ ಬದಲಾಗೋದಿಲ್ಲ ಎಂದು ಸಣ್ಣಗೆ ಬೈದುಕೊಂಡ. ಅಲ್ಲಿದ್ದವರಲ್ಲಿ ತಾನೊಬ್ಬನೇ ಸರಿ ಇದ್ದವನಂತೆ.

ಅಷ್ಟರಲ್ಲಿ ಮುಂದಿನ ಆಸನದ ಸಾಲಿನಲ್ಲಿ ಕೂತಿದ್ದವರೊಬ್ಬರು ರಿಂಗಾಗುತ್ತಿದ್ದ ಮೊಬೈಲ್ ಅನ್ನು ಅವುಚಿ ಹಿಡಿದು, ಗಡಿಬಿಡಿಯಲ್ಲಿ ಹೊರಗೆ ಧಾವಿಸಿದಾಗ ಸುಲೇಖ ಆ ಖಾಲಿಯಾದ ಆಸನದಲ್ಲಿ ಕೂತು ನಿಟ್ಟುಸಿರುಬಿಟ್ಟ. ಕುಳಿತ ತಕ್ಷಣವೇ ಜ್ಞಾನೋದಯವಾದವನಂತೆ ಕಿಸೆಯಿಂದ ಮೊಬೈಲ್ ತೆಗೆದು ತೀಡತೊಡಗಿದ. ಸುಮಾರು ಹೊತ್ತಿನ ತನಕ ನಡೆದ ಮೂಕ ಸಂಭಾಷಣೆಯ ಕೊನೆಯಲ್ಲಿ 'ಥತ್' ಎಂದು ಬಲಗೈ ಹಸ್ತದಿಂದ ತೊಡೆಯ ಮೇಲೆ ತಟ್ಟಿಕೊಂಡು ಉಸ್ ಅಂತ ನಿಟ್ಟುಸಿರುಬಿಡುತ್ತ ತಲೆ ಮೇಲೆ ಮಾಡಿದ.

ಒಂದೆರಡು ನಿಮಿಷದ ನಂತರ ಪಕ್ಕದಲ್ಲಿ ಕುಳಿತಿದ್ದವರು, 'ಏನಾದ್ರೂ ತೊಂದರೆ ಆಗ್ತಿದೆಯಾ?' ಎಂದು ಮೃದುವಾಗಿ ಇಂಗ್ಲಿಷ್‌ನಲ್ಲಿ ಕೇಳಿದಾಗ ಬೆಚ್ಚಿದವನಂತೆ ಸರಿಯಾಗಿ ಕುಳಿತು ಅತ್ತ ನೋಡಿದ. ಬಿಳಿಗೆಂಪು ಮುಖದ, ನೋಡಿದಾಕ್ಷಣ ಗೌರವ ಹುಟ್ಟಿಸುವ ವೃದ್ಧರೊಬ್ಬರು ಪ್ರೀತಿ ತುಂಬಿದ ಕಣ್ಣುಗಳಿಂದ ಸುಲೇಖನನ್ನೇ ನೋಡುತ್ತಿದ್ದರು. ಕ್ರಾಪ್ ಮಾಡಿದ ಅಚ್ಚ ಬಿಳಿ ತಲೆಗೂದಲು, ಸ್ವಚ್ಛವಾಗಿ ಶೇವ್ ಮಾಡಿದ್ದ ಮುಖದಲ್ಲಿನ ತುಸುವೇ ಸುಕ್ಕುಗಳು ಅವರ ಬಗ್ಗೆ ಆ ಕ್ಷಣದಲ್ಲಿ ಅವನಲ್ಲಿ ಅವ್ಯಕ್ತ ಭಾವನೆಗಳನ್ನು ಹುಟ್ಟಿಸಿಬಿಟ್ಟವು. 'ಹಂ, ಏನಿಲ್ಲ, ಓಕೆ' ಎಂದು ಕ್ಷೀಣವಾಗಿ ಹೇಳಿದಾಗ ಸಣ್ಣಗೆ ಸುಂದರವಾಗಿ ನಕ್ಕು, 'ನೀರು ಕುಡಿತೀಯಾ?' ಎಂದು ಕೇಳಿದರು. 'ಬೇಡ, ಬೇಡ' ಎಂದು ನಿರಾಕರಿಸಿದ.

ಅವನಿಗೆ ಇಲ್ಲಿ ತಾನೊಬ್ಬನೇ ಅನ್ಯ ಅನ್ನಿಸುವ ಕಿರಿಕಿರಿ ಒಳಗೆ ಹುಟ್ಟಿಕೊಂಡಿತು. ಐಟಿಯಲ್ಲಿದ್ದು ದೊಡ್ಡ ಮೊತ್ತದ ಸಂಬಳ, ಹೊರ ಜಗತ್ತಿನ ಮಂದಿ ಊಹಿಸಲೂ ಆಗದ ಕಂಪನಿಯ ಸೌಲಭ್ಯ, ಸವಲತ್ತು, ವೀಕೆಂಡ್‌ನಲ್ಲಿ ಉಡಾಯಿಸುವ ಮಜಾ, ದುಡ್ಡಿನ ದೌಲತ್ತು ಎಲ್ಲವೂ, ಇಲ್ಲಿ ಈ ಹಾಲ್‌ನಲ್ಲಿ ಅಡರಿಕೊಂಡ ಮಂದಿಯ ಸಹಜವಾದ ನಡವಳಿಕೆಯ ಎದುರು ಕೆಲಸಕ್ಕೆ ಬಾರದಂತೆ ಆಗುತ್ತಿದೆಯಲ್ಲ ಅನ್ನಿಸಿ ಒಳಗೊಳಗೆ ಕುಗ್ಗಿದ.

ಏರ್‌ಕಂಡಿಷನ್ ವಾತಾವರಣದಲ್ಲಿ ಲ್ಯಾಪ್‌ಟಾಪ್ ಎದುರು ಕೂತು ಕೆಲಸ ಮಾಡುತ್ತ, ಯಾರಾದರೂ ಸುಳಿದರೆ ಒಳಗಿಲ್ಲದ ಸಹಜ ಸುಖವನ್ನು ವ್ಯಕ್ತಪಡಿಸುತ್ತ, ಕಂಪನಿ ಒದಗಿಸುವ ಎಲ್ಲ ಸೌಲಭ್ಯಗಳನ್ನು ಮುಲಾಜಿಲ್ಲದೇ ಬಳಸಿಕೊಳ್ಳುತ್ತ, ಸಂಜೆ ಮನೆಗೆ ಬರುವಾಗಲೇ ತಿನ್ನುವ ಆಹಾರಕ್ಕೆ ಆರ್ಡರ್ ಮಾಡಿ, ಆತ್ಮೀಯರಲ್ಲದ, ನೆಪ ಮಾತ್ರಕ್ಕೆ ಸ್ನೇಹಿತರು ಎಂದು ಕರೆಯಿಸಿಕೊಳ್ಳುವ ಕೆಲವರೊಂದಿಗೆ ಚಾಟ್ ಮಾಡುತ್ತ, ಬಾಗಿಲಿಗೆ ಬಂದ ಆಹಾರವನ್ನು ತಿರುಗಿಬಂದ ದೇಶಗಳ ಸ್ಟೈಲಿನಲ್ಲಿ ಕಬಳಿಸುತ್ತ, ಲೈಫ್ ಇಸ್ ಮೋರ್ ಎನ್ನುವ ಆಹ್ಲಾದದಲ್ಲಿ ಬದುಕುತ್ತಿದ್ದ ಸುಲೇಖನಿಗೆ ಇಲ್ಲಿದ್ದ ಮಂದಿ ಈ ಕ್ಷಣದಲ್ಲಿ ಅವರವರ ಭಾವಕ್ಕೆ ತಕ್ಕಂತೆ ಬದುಕುತ್ತಿರುವುದನ್ನು ಕಂಡು